ಒ ಎಸ್ ನಂ.140/2019

ಪಿ ಡಬ್ಲ್ಯೂ 1

ದಿನಾಂಕ 10.07.2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ– ಪ್ರತಿವಾದಿ 1 ರಿಂದ 3 ರವರ ಪರ ಶ್ರೀ ಎಸ್ ಎ ಆರ್ ವಕೀಲರಿಂದಃ**

ದಿನಾಂಕಃ 29.02.2008 ರಂದು 1 ನೇ ಪ್ರತಿವಾದಿ ಹಾಗೂ ಸಿದ್ದಪ್ಪಸ್ವಾಮಿಯು ದಾವಾ ಐಟಂ 1 ಮತ್ತು 7 ರ ಆಸ್ತಿಯನ್ನು 11 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಕ್ರಯ ಆದ ನಂತರದಿಂದ 11 ನೇ ಪ್ರತಿವಾದಿ ಸದರಿ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 40/3 ಆಸ್ತಿ ನನಗೆ ಗೊತ್ತಿರುತ್ತದೆ. ಸರ್ವೆ ನಂಬರ್ 40/3 ಆಸ್ತಿಯನ್ನು 1 ನೇ ಪ್ರತಿವಾದಿಯ ತಂದೆ ಎ ಎಂ ಮಸಣಶೆಟ್ಟಿ ರವರಿಗೆ ವಿಲ್ ಮೂಲಕ ಬಂದಿದ್ದು, ಸದರಿ ಎ ಎಂ ಮಸಣಶೆಟ್ಟಿ ತಮ್ಮ ಜೀವಿತಾವಧಿಯಲ್ಲಿ 9 ನೇ ಪ್ರತಿವಾದಿಯ ಜೀವನಾಂಶಕ್ಕೆ ವಹಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ಜೀವನಾಂಶಕ್ಕಾಗಿ ವಹಿಸಿಕೊಟ್ಟ ನಂತರ ಸರ್ವೆ ನಂಬರ್ 40/3 ಆಸ್ತಿಯ ಖಾತೆ 9 ನೇ ಪ್ರತಿವಾದಿಯ ಹೆಸರಿಗನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

1 ನೇ ಪ್ರತಿವಾದಿಯ ತಂದೆ ಎ ಎಂ ಮಸಣಶೆಟ್ಟಿಯವರು ಅರಣ್ಯ ಇಲಾಖೆಯಲ್ಲಿ ಮೂಲತಃ ಅರಣ್ಯ ರಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದು ನಂತರ ಬಡ್ತಿ ಹೊಂದಿ ಅರಣ್ಯ ಪಾಲಕರಾಗಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆ ಎ ಎಂ ಮಸಣಶೆಟ್ಟಿಯವರು ನಿವೃತ್ತಿ ಹೊಂದಿದ ನಂತರ ತಮಗೆ ಬಂದ ನಿವೃತ್ತಿ ಹಣದಿಂದ ಹಾಗೂ ಪಿಂಚಣಿ ಹಣದಿಂದ ದಾವಾ ಐಟಂ 4 ಸರ್ವೆ ನಂಬರ್ 315/ಎ ರಲ್ಲಿ 69 ಸೆಂಟ್ , ದಾವಾ ಐಟಂ ಸರ್ವೆ ನಂಬರ್ 24/ಎ2 ರಲ್ಲಿ 10 ಸೆಂಟ್, ಸರ್ವೆ ನಂಬರ್ 24/ಎ3 ರಲ್ಲಿ 20 ಸೆಂಟ್,

ದಾವಾ ಐಟಂ 6 ರ ಆಸ್ತಿಯನ್ನು ಹಲವಾರು ಕ್ರಯಪತ್ರಗಳ ಮೂಲಕ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ತಂದೆ ಎ ಎಂ ಮಸಣಶೆಟ್ಟಿಯವರು ದಿನಾಂಕಃ 07.05.2010 ರಂದು ಮರಣ ಹೊಂದಿರುತ್ತಾರೆ.

1 ನೇ ಪ್ರತಿವಾದಿಯ ತಂದೆ ಎ ಎಂ ಮಸಣಶೆಟ್ಟಿಯವರ ವರ್ಗ 1 ರ ವಾರಸುದಾರರಾಗದ ಕಾರಣ ನನಗೆ ಹಾಗೂ ಇತರ ವಾದಿಗಳಿಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಬಾಧ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

1 ರಿಂದ 3 ನೇ ಪ್ರತಿವಾದಿಗಳು ದಾವಾ ಸ್ವತ್ತಿನ ಜಂಟಿ ಸ್ವಾಧೀನದಲ್ಲಿ ಇದ್ದು ಸಾಗುವಳಿ ಮಾಡುತ್ತಿರುತ್ತಾರೆ ಎಂದರೆ ಸರಿ.

ದಾವಾ ಐಟಂ ನಂಬರ್ 8 ರ ಆಸ್ತಿಯಾದ ಸಿದ್ದಯ್ಯನಪುರ ಗ್ರಾಮದ ಸರ್ವೆ ನಂಬರ್ 45/ಬಿ2 ರ ಬಗ್ಗೆ ನನಗೆ ಗೊತ್ತಿರುತ್ತದೆ.

ದಾವಾ ಐಟಂ ನಂಬರ್ 9 ಮತ್ತು 10 ರ ಆಸ್ತಿಯು ನಿಮ್ಮ ತಂದೆಯ ವಿಭಾಗಕ್ಕೆ ಬಂದ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ವಿಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯ ವಿಭಾಗಕ್ಕೆ ಬಂದ ದಾವಾ ಐಟಂ 9 ಮತ್ತು 10 ಆಸ್ತಿಯನ್ನು ನಮಗೆ ಕೊಡಿಸಿ ಎಂದು ಊರಿನ ಯಜಮಾನರಾದ ರಮೇಶ್ ಹಾಗೂ ಗಣೇಶ್ ರವರನ್ನು ಕೇಳಿದ್ದೆವು ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಿಭಾಗವಾಗಿರುವುದಿಲ್ಲ ಎಂದು ನುಡಿಯುತ್ತಾರೆ.

ಪಿ ಡಬ್ಲ್ಯೂ 1

2 ನೇ ಪ್ರತಿವಾದಿಯು ನನಗೆ ಚಿಕ್ಕಪ್ಪನಾಗಬೇಕು ಎಂದರೆ ಸರಿ. 2 ನೇ ಪ್ರತಿವಾದಿಗೆ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಯ ಕುಟುಂಬದವರು ಪ್ರತ್ಯೇಕವಾಗಿ ವಾಸ ಇರುತ್ತಾರೆ ಎಂರದ ಸರಿಯಲ್ಲ.

1 ನೇ ಪ್ರತಿವಾದಿ ಹಾಗೂ ಅವರ ಸಹೋದರರು ವಿಭಾಗ ಮಾಡಿಕೊಂಡು, ಪ್ರತ್ಯೇಕವಾಗಿ ವಾಸವಿದ್ದು, ಸದರಿಯವರು ವಿಭಾಗದಂತೆ ಖಾತೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ವಿಭಾಗವಾಗಿರವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಐಟಂ 1 ಆಸ್ತಿಯಾದ ಸರ್ವೆ ನಂಬರ್ 511/2 ರಲ್ಲಿ 72 ಸೆಂಟ್ ಆಸ್ತಿಯು 2 ನೇ ಪ್ರತಿವಾದಿಗೆ ನೋಂದಾಯಿತ ಸಾಮಾನ್ಯ ಅಧಿಕಾರ ಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ನಾನು ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ 9 ರ ಆಸ್ತಿಯಾದ ಮನೆಯನ್ನು 2 ನೇ ಪ್ರತಿವಾದಿ ತಮ್ಮ ಸ್ವಂತ ಖರ್ಚಿನಿಂದ ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಮದುವೆಯ ಕಾಲದಲ್ಲಿ 1 ನೇ ಪ್ರತಿವಾದಿಯನ್ನು ಮದುವೆಗೆ ಕರೆದಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯನ್ನು ನನ್ನ ತಾಯಿಯು ಬಿಟ್ಟು ನಮ್ಮೊಂದಿಗೆ ಪ್ರತ್ಯೇಕವಾಗಿ ವಾಸ ಇರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ನಂದಿನಿ ಎಂ.ಎನ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ.